# ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.592/2025**

**ಪಿರ್ಯಾದಿ** : ಕರ್ನಾಟಕ ಸರ್ಕಾರ
ಗೋಣಿಕೊಪ್ಪ ಪೋಲೀಸ್.

**ವಿರುದ್ದ**

**ಆರೋಪಿ:** ಶ್ರೀ ಪವನ್ ಕುಮಾರ್ ಎಮ್.ಎಮ್,
ತಂದೆಃ ಮೋಹನ್ ಕುಮಾರ್ ಪಿ.ಆರ್,
ಪ್ರಾಯಃ 20 ವರ್ಷ,
ವಾಸಃ ಚೆನ್ನಂಗೊಲ್ಲಿ ಪೈಸಾರಿ,
ಬಾಳಾಜಿ ಗ್ರಾಮ, ಪೊನ್ನಂಪೇಟೆ ತಾಲ್ಲೂಕು,
ಕೊಡಗು.

**ದೋಷಾರೋಪಣೆ**

*ಶ್ರೀ ಶ್ರೀನಾಥ್ ಎ, ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಯಾದ ನಾನು ಆರೋಪಿಯಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ*

ದಿನಾಂಕ 01.03.2025 ರಂದು ಸಮಯ ಸಂಜೆ 4.30 ಗಂಟೆಗೆ ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಬಾಳಾಜಿ ಗ್ರಾಮದ ಚೆನ್ನ್ಮಂಗೊಲ್ಲಿ ಪೈಸಾರಿಯಲ್ಲಿರುವ ಮೋಹನ್ ಪಿ.ಆರ್ ರವರ ವಾಸದ ಮನೆಯಲ್ಲಿ ಸಾಕ್ಷಿ 1 ಅಕ್ಷಿತಾ ರವರು ಇದ್ದು, ಸಾಕ್ಷಿ 2 ಮೋಹನ್ ರವರು ಮದ್ಯಪಾನ ಮಾಡಿಕೊಂಡು ಸಾಕ್ಷಿ 3 ಲಲಿತಾರವರೊಂದಿಗೆ ಗಲಾಟೆ ಮಾಡಿಕೊಂಡಿರುವಾಗ, ಆರೋಪಿಯಾದ ನೀವು ತಮ್ಮ ಮನೆಯ ಮುಂಭಾಗದಲ್ಲಿ ಸೌದೆ ಕಡಿಯುತ್ತಿದ್ದ ಮಂಡೆಕತ್ತಿಯಿಂದ ಸಾಕ್ಷಿ 2 ರವರ ಎಡ ಕೈಗೆ ಮತ್ತು ಎಡಭಾಗದ ಎದೆಯ ಭಾಗಕ್ಕೆ ಕಡಿದು ತೀವ್ರ ಸ್ವರೂಪದ ಗಾಯ ಪಡಿಸಿರುತ್ತೀರಿ ಎಂಬುದಾಗಿರುತ್ತದೆ. ಆ ಕಾರಣ ಭಾರತೀಯ ನ್ಯಾಯ ಸಂಹಿತೆ ಕಲಂ 118(2) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

Sd/-

ದಿನಾಂಕ:17.04.2026. **ಸಿವಿಲ್ ನ್ಯಾಯಾಧೀಶರು ಮತ್ತು**

ಸ್ಥಳ: ಪೊನ್ನಂಪೇಟೆ. **ಪ್ರದನ್ಯಾದಂ,ಪೊನ್ನಂಪೇಟೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.592/2025**

| | | |
|---|---|---|
| **ಪಿರ್ಯಾದಿ** | : | ಕರ್ನಾಟಕ ಸರ್ಕಾರ,<br>ಗೋಣಿಕೊಪ್ಪ ಪೋಲೀಸ್, |
| | | **ವಿರುದ್ಧ** |
| **ಆರೋಪಿ** | : | ಶ್ರೀ ಪವನ್ ಕುಮಾರ್ ಎಮ್.ಎಮ್, |

**ಭಾರತೀಯ ನಾಗರೀಕ ಸುರಕ್ಷ ಸಂಹಿತೆ ಕಲಂ 263 ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರಃ ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿಃ17.04.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

**Sd/-**

**ದಿನಾಂಕಃ 17.04.2026**
**ಸ್ಥಳಃ ಪೊನ್ನಂಪೇಟೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂ, ಪೊನ್ನಂಪೇಟೆ**